


ಕೋಟಿತೀರ್ಥದ ಗಲೀಜು ನೀರು ನೋಡಿ ಕಸಿವಿಸಿಯಾಗಿತ್ತು. ಆದರೂ ನೀರಿನಲ್ಲಿ ಮುಳುಗೆದ್ದು, ಮೈ ಒರೆಸಿಕೊಂಡು ಬಂದು ಯಜ್ಞಕುಂಡದ ಮುಂದೆ ಕುಳಿತಿದ್ದ. ಎರಡು ಗಂಟೆಗಳ ಕಾಲ ಪೂಜೆ. ಪೂಜೆ ಕೊನೆಯ ಹಂತಕ್ಕೆ ಬಂದು ಪಿಂಡ ಪ್ರದಾನವಾಗುವ ಸಮಯದಲ್ಲಿ ಮಂತ್ರ ಪಠಿಸುತ್ತಿದ್ದ ಪುರೋಹಿತರಲ್ಲಿ ಅತ್ಯಂತ ಹಿರಿಯರು ಆರು ತಲೆಮಾರಿನ ಪೂರ್ವಜರ ಹೆಸರೇಳಲು ಹೇಳಿದ್ದರು. ಅಲ್ಲಮಪ್ರಭು ತನ್ನಪ್ಪ, ಅಮ್ಮ, ತಾತ, ಅಜ್ಜಿ ಹೆಸರಗಳನ್ನಷ್ಟೇ ಹೇಳಿದ್ದ. ಮತ್ತು ಹಿಂದಿನ ತಲೆಮಾರಿನ ಪೂರ್ವಜರ ಹೆಸರು ಗೊತ್ತಿಲ್ಲವೆಂದು ಹೇಳಿದ. ಹಿರಿಯ ಪುರೋಹಿತರಿಗೆ ಇದ್ದಕ್ಕಿದ್ದಂತೆ ಕೋಪ ಬಂದಿತ್ತು. ''ಪೂಜೆಗೆ ಬರುವ ಮೊದಲು ಪಿತೃಗಳ ಹೆಸರುಗಳನ್ನೆಲ್ಲ ಸರಿಯಾಗಿ ತಿಳಿದುಕೊಂಡು ಬರಬೇಕು. ಪಿತೃಗಳ ಬಗ್ಗೆ ಇಂಥ ಉದಾಸೀನ ಧೋರಣೆ ಇರುವುದರಿಂದಲೇ ನಿನ್ನ ಸುತ್ತ ನರಕ ಸೃಷ್ಟಿಯಾಗಿರೋದು. ನಿನಗೆ ಗೊತ್ತಾ, ನಿನ್ನ ವಂಶದ ನಿನ್ನ ಹಿಂದಿನ ಐದನೇ ಪಿತೃವೊಬ್ಬ ಸ್ತ್ರೀ ಹತ್ಯೆ ಮಾಡಿದ್ದಾನೆ. ಅನಂತರದ ತಲೆಮಾರಿನಿಂದ ನಿನ್ನ ವಂಶಕ್ಕೆ ಬಲವಾದ ಶಾಪ ತಟ್ಟಿದೆ. ಅದು ನಿನ್ನನ್ನು ಬಲವಾಗಿ ಆವರಿಸಿದೆ. ಸಾಲದೆಂಬಂತೆ ನಿನ್ನ ವಂಶದ ಸುಮಾರು ಹಿರಿಯರು ಸರ್ಪಗಳನ್ನು ಕೊಂದಿದ್ದಾರೆ. ಹಾಗಾಗಿ ನಿನ್ನನ್ನು ದಟ್ಟವಾದ ಸರ್ಪದೋಷವೂ ಸುತ್ತಿಕೊಂಡಿದೆ. ನಾನೇಳ್ತೇನೆ ತಿಳಿದುಕೊ, ಯಃಕಶ್ಚಿತ್ ಒಬ್ಬ ಸೂಳೆಯ ಜೊತೆಗೂ ನಿನ್ನ ಲಗ್ನವಾಗುವುದಿಲ್ಲ...'' ಎಂದು ನುಡಿದಿದ್ದರು.

ಆ ಕ್ಷಣ ಅಲ್ಲಮಪ್ರಭುವಿನ ಇಡೀ ಶರೀರ ಬೆವತು ನಡುಗಲು ಪ್ರಾರಂಭಿಸಿತ್ತು. ಯಜ್ಞಕುಂಡದ ಮುಂದೆ ಕುಳಿತಿದ್ದವನು ದಿಗ್ಗನೆ ಎದ್ದು ನಿಂತ. ಬಾಯಿ ಒಣಗಿದಂತಾಗಿತ್ತು. ತಾನು ಓದಿದ್ದ ಬಿ.ಎಸ್ಸಿ.ಯ ಪಾಠಗಳು ನೆನಪಾಗಿದ್ದವು. ''ನನ್ನ ಪಿತೃ ಸ್ತ್ರೀ ಹತ್ಯೆ ಮಾಡಿರುವುದು ನಿನಗೆ ಹೇಗೆ ಗೊತ್ತಾಯ್ತೋ ಭಟ್ಟ. ಇಷ್ಟಕ್ಕೂ ಮಾಡಿದ್ದರೂ ಸ್ತ್ರೀ ಹತ್ಯೆಯನ್ನು ಯಾಕೆ ಬೇಕಂತ ಮಾಡಿರುತ್ತಾರೆ. ಯಾರೂ ಘನವಾದ ಕಾರಣವಿಲ್ಲದೆ ತಪ್ಪು ಮಾಡಲಾರರು. ಇಡೀ ಜಗತ್ತನ್ನು, ಪ್ರತಿಯೊಬ್ಬ ಮನುಷ್ಯನ ಮನಸ್ಸನ್ನು ನಿಯಂತ್ರಿಸುವುದು ದೇವರೇ ಆದಲ್ಲಿ, ದೇವರೇಕೆ ಆ ಹತ್ಯೆಯನ್ನು ನಿಲ್ಲಿಸಲಿಲ್ಲ. ಪ್ರತಿಯೊಂದು ಕಾರ್ಯಕ್ಕೂ ದೇವರ ಪ್ರೇರಣೆ ಇರಬೇಕು ಅಂತೀರಲ್ಲ, ಅಂಥ ಕೆಟ್ಟ ಪ್ರೇರಣೆಯನ್ನು ಯಾರಿಗಾದರಾಗಲೀ ದೇವರು ಏಕೆ ಕೊಡಬೇಕು. ಹದಿನೈದು ವರ್ಷಗಳ ಹಿಂದೆ ಮೀನಾಕ್ಷಿ ಹೆಗಡೆ ನನ್ನನ್ನು ಕುಮಟೆಯ ಬಸ್ ಸ್ಟ್ಯಾಂಡ್‌ಗೆ ಕರೆದವಳು ಏಕೆ ಕೈಕೊಟ್ಟು ಕ್ಯಾಶ್ಯೂ ಫ್ಯಾಕ್ಟರಿಯ ಓನರ್ ಹಿಂದೆ ಮುಂಬಯಿಗೆ ಓಡಿಹೋದಳು. ಅದನ್ನು ದೇವರು ತಾನೇ ಮಾಡಿದ್ದು. ಈ ಕೋಟಿತೀರ್ಥದ ಬೀದಿಯಲ್ಲಿ ಎಷ್ಟು ಮನೆಗಳ ಮುಂದೆ ಮೆಂಟಲಿ ರಿಟಾರ್ಟೆಡ್ ಜನರನ್ನು ನೋಡಿಲ್ಲ, ಎಷ್ಟು ಜನ ಹೆಂಗಸರು, ಗಂಡಸರು ವಯಸ್ಸು ಮೀರಿದ್ದರೂ ಮದುವೆಯಾಗದೆ ಹಾಗೆ ಉಳಿದಿಲ್ಲ? ಅವರಿಗೆಲ್ಲಾ ಪಿತೃ ಶಾಪವಿಲ್ಲವೆ? ನೀವೇಕೆ ಪಿತೃ ಶಾಪ ಪರಿಹಾರ ಮಾಡಿಲ್ಲ? ಇಷ್ಟಕ್ಕೂ ಇಲ್ಲಿದ್ದ ಆತ್ಮಲಿಂಗವೇ ಜಾಗ ಖಾಲಿ ಮಾಡಿದೆಯಂತೆ. ಯಾಕೆ ಗೊತ್ತಾ, ಇಲ್ಲಿನ ಗಲೀಜನ್ನು ನೋಡಿ. ಸೂಳೆ ಕೂಡಾ ನನ್ನನ್ನು ಮದುವೆಯಾಗುವುದಿಲ್ಲವೆಂದು ಹೇಳಲಿಕ್ಕೆ ನೀನೇನು ಬ್ರಹ್ಮನೇನು. ಇಲ್ಲ, ನೀನು ಬ್ರಹ್ಮನಿಗೆ ಹುಟ್ಟಿದವನೇನು? ಇಷ್ಟಕ್ಕೂ ಸೂಳೆ ಕೂಡ ಒಂದು ಹೆಣ್ಣು ಎಂಬುದನ್ನು ನೀನು ಮರೆತಂತಿದೆ. ನಿನಗೆ ಎಷ್ಟು ತಲೆಮಾರಿನ ಪಿತೃಗಳ ಹೆಸರು ಗೊತ್ತಿದೆ ಬೊಗಳು ಮತ್ತೆ...'' ಎಂದು ಪಂಚೆಯನ್ನು ಬಿಚ್ಚಿಟ್ಟು, ಬ್ಯಾಗಿನಲ್ಲಿದ್ದ ಪ್ಯಾಂಟ್ ಶರ್ಟನ್ನು ತೊಟ್ಟು ಜಾಗ ಖಾಲಿ ಮಾಡಿದ್ದ. ಅಲ್ಲಿ ಪೂಜೆಯಲ್ಲಿ ತೊಡಗಿದ್ದ ಜನರ ಗುಂಪು ಪೂಜೆಯನ್ನು ನಿಲ್ಲಿಸಿ ಅಲ್ಲಮಪ್ರಭುವಿನ ಮಾತುಗಳಲ್ಲಿ ತಲ್ಲೀನವಾಗಿಬಿಟ್ಟಿತ್ತು. ಅಲ್ಲಮಪ್ರಭು ಪೇಟೆ ಬೀದಿಗೆ ನಡೆದು ಅಲ್ಲಿಂದ ಸೀದಾ ಟ್ಯಾಕ್ಸಿ ಮಾಡಿಕೊಂಡು ರೆಸಾರ್ಟ್ ರೂಮಿಗೆ ನಡೆದ. ತನ್ನ ಇಡೀ ಜೀವಮಾನದಲ್ಲಿ ಇಂಥ ಉದ್ವೇಗಕ್ಕೆ ಅವನೆಂದೂ ಒಳಗಾಗಿರಲಿಲ್ಲ. ರೂಮು